ಎಸ್.ಟಿ.ಐ.ಪಿ ವಿಸರ್ಜನೀಕರಣ.

1842(1525) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಿಣ) :— ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಎಸ್.ಟಿ.ಐ.ಪಿ.ನಲ್ಲಿ ಎಷ್ಟು ಜನ ಉದ್ಯೋಗಿಗಳು ಇಲ್ಲಿಯವರೆಗೆ ಸ್ವಯಂ ನಿವೃತ್ತಿಯನ್ನು ಹೊಂದಿರುತ್ತಾರೆ, ಈಗ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಗಳ ಸಂಖ್ಯೆ ಎಷ್ಟು, ಕಳೆದ ವರ್ಷದ ಒಟ್ಟು ಉತ್ಪಾದನೆ ಎಷ್ಟು; ಸಂಸ್ಥೆ ಕಳೆದ ವರ್ಷ ಗಳಿಸಿದ ಲಾಭ ಎಷ್ಟು;

2) ಈ ಕಾರ್ಖಾನೆಯನ್ನು ವಿಸರ್ಜನೀಕರಣಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ? ಹಾಗಿದ್ದಲ್ಲಿ, ಈ ಕಾರ್ಖಾನೆಯನ್ನು ಮಹಿಸಿಕೊಳ್ಳಲು ಯಾರು ಮುಂದೆ ಬಂದಿದ್ದಾರೆ, ವಿವರ ನೀಡುವುದು;

3) ವಿಸರ್ಜನೀಕರಣಗೊಂಡ ನಂತರ ಈ ಕಾರ್ಖಾನೆಯ ಭವಿಷ್ಯವೇನು ಇವರಿಗೆ ಯಾವ ರೀತಿಯ ನೌಕರಿಯ ಭದ್ರತೆಯನ್ನು ನೀಡಲಾಗುತ್ತಿದೆ.

4) ಈ ಕಾರ್ಖಾನೆಯನ್ನು ಸಂಪೂರ್ಣವಾಗಿ ವಿಸರ್ಜನೀಕರಣಗೊಳಿಸಲಾಗುವುದೇ ಅಥವಾ ಭಾಗಶಃ ವಿಸರ್ಜನೀಕರಣಗೊಳಿಸಲಾಗುವುದೇ, ಭಾಗಶಃ ವಿಸರ್ಜನೀಕರಣವಾದಲ್ಲಿ ಇದರಲ್ಲಿ ಸರ್ಕಾರದ ಭಾಗ ಎಷ್ಟು;

5) ಈ ಕಾರ್ಖಾನೆಯಲ್ಲಿ ಕಾರ್ಮಿಕರನ್ನು ಬಲವಂತವಾಗಿ ಸ್ವಯಂ ನಿವೃತ್ತಿಯ ಹೆಸರಿನಲ್ಲಿ ಮನೆಗೆ ಕಳುಹಿಸುತ್ತಿರುವುದು ನಿಜವೇ ಹಾಗಿದ್ದಲ್ಲಿ, ಇದಕ್ಕೆ ಕಾರಣ ನೀಡುವುದು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

1) 1996ರಿಂದ ಇಲ್ಲಿಯವರೆಗೆ ಸ್ವಯಂ ನಿವೃತ್ತ ಹೊಂದಿರುವ ನೌಕರರು - 2778

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರು - 2343

2000-01ನೇ ಸಾಲಿನ ಉತ್ಪಾದನೆ	ರೂ. 8385.87	ಲಕ್ಷ
2000-01ನೇ ಸಾಲಿನ ಫಲಿತಾಂಶ ನಷ್ಟ	ರೂ. 4507.52	ಲಕ್ಷ
ಆಸ್ತಿಯ ಮಾರಾಟ	ರೂ. 6638.72	ಲಕ್ಷ
ಆಸ್ತಿಯ ಮಾರಾಟದಿಂದ ಬಂದ ಲಾಭ	ರೂ. 2131.20	ಲಕ್ಷ

2) ಹೌದು. ಸರ್ಕಾರಿ ಆದೇಶ ಸಂಖ್ಯೆ: ಸಿಇ 28 ಸಿಆಎಲ್ 2000 (ಪಿಯುಸಿ-ಭಾ-2) ದಿ: 31-3-2001ರಂತೆ ಈ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಉದ್ದೇಶಿಸಲಾಗಿದೆ. ಅದರಂತೆ ಜಾಗತಿಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಈ ಕಾರ್ಖಾನೆಯನ್ನು ಖರೀದಿಸಿಕೊಳ್ಳಲು ಯಾರೂ ಮುಂದೆ ಬಂದಿಲ್ಲ.

3) ಇದುವರೆಗಿನ ಖಾಸಗೀಕರಣ ಪ್ರಕ್ರಿಯೆಯು ವಿಫಲವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

4) ಇದುವರೆಗಿನ ಖಾಸಗೀಕರಣ ಪ್ರಕ್ರಿಯೆಯು ವಿಫಲವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

5) ಇಲ್ಲ. ಕೆ.ಎಸ್.ಐ.ಡಿ.ಬಿ. ಮಾರ್ಗದರ್ಶಿ ಸೂತ್ರದಲ್ಲಿಯ ಕಾರ್ಖಾನೆಯ ನೌಕರರಿಗೆ ಸ್ವಯಂ ನಿವೃತ್ತಿಯನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ ಪಶುವೈದ್ಯ ವಿಶ್ವವಿದ್ಯಾನಿಲಯ.

1243(1206) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಪಶು ವಿಶ್ವವಿದ್ಯಾನಿಲಯವನ್ನು ಇದುವರೆಗೂ ಸ್ಥಾಪಿಸದಿರಲು ಕಾರಣಗಳೇನು?

2) ಪ್ರಸಕ್ತ ಸಾಲಿನಿಂದಲೇ ಈ ವಿಶ್ವವಿದ್ಯಾನಿಲಯವನ್ನು ತೆರೆಯಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

2) ಇನ್ನೂ ಅಂತಿಮ ನಿರ್ಣಯ ಕೈಗೊಂಡಿರುವುದಿಲ್ಲ.

ರಾಜ್ಯದಲ್ಲಿ ಪಶು ಕ್ಷೇತ್ರಕ್ಕೆ ಆಯವ್ಯಯದಲ್ಲಿ ಒದಗಿಸಿದ ಹಣ.

17.44(1207) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪಶು ಕ್ಷೇತ್ರಕ್ಕೆ ಒದಗಿಸಲಾಗಿರುವ ಹಣವೆಷ್ಟು?